**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.682/2024**

**CW-2 PW-2**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಯಲ್ಲಪ್ಪ |
| ತಂದೆ | ಃ | ಶಿವಪ್ಪ |
| ವಯಸ್ಸು | ಃ | 40 |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಜಾಲಹಳ್ಳಿ |
| ಪ್ರಮಾಣಿಕರಿಸಿದ ದಿನಾಂಕ | ಃ | **05**-06-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇರುವುದಿಲ್ಲ ಪೋಲಿಸರು ಸಹಿ ಮಾಡು ಎಂದಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ. ನಾನು ಹೆಬ್ಬರಳಿನ ಗುರುತು ಹಾಕುತ್ತೇನೆ. ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ.**

ದಿನಾಂಕ 10-08-2024 ರಂದು ಸಂಜೆ 04.40 ರಿಂದ 05.30 ಗಂಟೆಗೆ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಗುನ್ನೆ ಸ್ಥಳದಲ್ಲಿ ಪೊಲೀಸರು ನಿಪಿ-1 ರಂತೆ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿ ಆರೋಪಿಯಿಂದ ಅಕ್ರಮ ಮದ್ಯವನ್ನು ಜಪ್ತಿ ಮಾಡಿಕೊಡು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ದೇವದುರ್ಗ.**

**CC No.682/2024**

**CW-1 PW-1**

| | | |
|---|---|---|
| ಸಾಕ್ಷಿದಾರರ ಹೆಸರು | : | ವೈಶಾಲಿ ಝುಳಕಿ |
| ವಯಸ್ಸು | : | 32 |
| ಉದ್ಯೋಗ | : | ಪಿ.ಎಸ್.ಐ ಜಾಲಹಳ್ಳಿ |
| ವಾಸಸ್ಥಳ | : | ಜಾಲಹಳ್ಳಿ |
| ಪ್ರಮಾಣಿಕರಿಸಿದ ದಿನಾಂಕ | : | **05**-06-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು ದಿನಾಂಕ 24.06.2024 ರಿಂದ ಇಲ್ಲಿವರೆಗೆ ಪಿ.ಎಸ್.ಐ ಜಾಲಹಳ್ಳಿ ಎಂದು ಕೆಲಸ ಮಾಡುತ್ತಿದ್ದೇನೆ.

ದಿನಾಂಕ 10.08.2024 ರಂದು ಸಂಜೆ 4 ಗಂಟೆಗೆ ನಾನು ಕರ್ಛೇರಿಯಲ್ಲಿ ಇದ್ದಾಗ ಕರಡಿಗುಡ್ಡ ಗ್ರಾಮದ ಡಬ್ಬಿ ಅಂಗಡಿಯಲ್ಲಿ ಹನುಮಂತರಾಯ ಎನ್ನುವವರು ಸಾರ್ವಜನಿದಿಕ ಸ್ಥಳದಲ್ಲಿ ಅನಧಿಕೃತವಾಗಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದ ಮೇರೆಗೆ ತಕ್ಷಣ ಸದರಿ ದಾಳಿ ಕುರಿತು ನಮ್ಮ ಸಿಬ್ಬಂದಿಯಾದ ಚಾಸಾ-4 ರಿಂದ 6 ರವರಿಗೆ ತಿಳಿಸಿದ್ದು, ನಂತರ ಠಾಣೆಗೆ ಚಾಸಾ-2 ಮತ್ತು 3 ರವರನ್ನು ಬರ ಮಾಡಿಕೊಂಡು ದಾಳಿ ವಿಷಯ ಕುರಿತು ತಿಳಿಸಿದ್ದು ಸದರಿಯವರು ಪಂಚನಾಮೆಗೆ ಸಮತ್ತಿಸಿರುತ್ತಾರೆ. ನಂತರ ನಾವು ನಮ್ಮ ಸರಕಾರಿ ವಾಹನ ನಂ.ಕೆಎ-36 ಜಿ-0474 ರಲ್ಲಿ ಹೊರಟು ಸಂಜೆ 04.30 ಗಂಟೆಗೆ ಕರಡಿಗುಡ್ಡ ಗ್ರಾಮದ ಸರಕಾರಿ ಶಾಲೆ ಹತ್ತಿರ ಜೀಪನ್ನು ನಿಲ್ಲಿಸಿ ನೋಡಲಾಗಿ ಹನುಮಂತರಾಯ ತನ್ನ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಮದ್ಯದ ಪೌಚುಗಳನ್ನು ಅವನ ಸುತ್ತಲು ನಿಂತಿದ್ದ ಜನರಿಗೆ ಮಾರಾಟ ಮಾಡುತ್ತಿದ್ದುದ್ದನ್ನು ಖಚಿತ ಪಡಿಸಿಕೊಂಡು ಸಂಜೆ 04.40 ಗಂಟೆಗೆ ದಾಳಿ ಮಾಡಿದ್ದು ನಮ್ಮನ್ನು ನೋಡಿ ಅಲ್ಲಿ ನಿಂತಿದ್ದ ಜನರು ಓಡಿ ಹೋಗಿರುತ್ತಾರೆ, ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿದ್ದು ಆತನ ಹೆಸರು ವಿಚಾರಿಸಿದಾಗ ಹನುಮಂತರಾಯ ತಂದೆ ಭೀವಮಶಪ್ಪ ಎಂದು ತಿಳಿದು ಬಂದಿದ್ದು, ಸದರಿ ಮದ್ಯ ಮಾರಾಟದ ಬಗ್ಗೆ ದಾಖಲಾತಿಗಳನ್ನು ಕೇಳಿದ್ದು ಅದಕ್ಕೆ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ಹೇಳಿದ್ದು ಪಂಚರ ಸಮಕ್ಷಮ ಆತನ ಬಳಿ ಇದ್ದ 90 ಎಂ.ಎಲ ಓ.ಸಿ ವಿಸ್ಕಿ 32 ಪೌಚುಗಳು ದೊರೆತಿದ್ದು ಅವು ಒಟ್ಟು 2.8 ಲೀಟರ್ ಇದ್ದು ಅವುಗಳ ಒಟ್ಟು ಮೌಲ್ಯ ರೂ.1279/- ಇರುತ್ತದೆ. ಸದರಿ ಮದ್ಯವನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಸ್ಥಳದಲ್ಲಿ ಪಂಚನಾಮೆ ಮಾಡಿ ಜಪ್ತಿ ಮಾಡಿಕೊಂಡ ಎಲ್ಲ ಮದ್ಯವನ್ನು ರಾಸಾಯಾನಿಕ ಪರೀಕ್ಷೆಗೆ ಕಳುಹಿಸಲು ಸಿಲ್ ಮಾಡಿ ಎಸ್.ಕೆ ಎಂಬ ಮೊಹರನ್ನು

ಹಾಕಲಾಗಿರುತ್ತದೆ. ಸದರಿ ಪಂಚನಾಮೆಯನ್ನು ಸಂಜೆ 04.40 ರಿಂದ 05.40 ಗಂಟೆ ವರೆಗೆ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-1 ಎಂದು ಸಹಿಯನ್ನು ನಿಪಿ-1ಎ ಎಂದು, ದೂರನ್ನು ನಿಪಿ-2 ಎಂದು ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸದರಿ ದೂರು, ಪಂಚನಾಮೆ ಮತ್ತು ಆರೋಪಿಯನ್ನು ಜಪ್ತಿ ಮಾಡಿಕೊಂಡ ಮದ್ಯದ ಜೊತೆ ಠಾಣೆಗೆ ಬಂದು ಠಾಣಾಧಿಕಾರಿಯವರಿಗೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಎಸ್.ಪಿ ವಕೀಲರಿಂದ</u>**

ಚಾಸಾ-5 ಮತ್ತು 6 ರವರು ಪಂಚರನ್ನು ಬರ ಕರೆ ತಂದಿರುತ್ತಾರೆ. ನಂತರ ಪಂಚರು, ಸಿಬ್ಬಂದಿ ಮತ್ತು ನಾನು ಸ್ಥಳಕ್ಕೆ ಹೋಗಿರುತ್ತೇವೆ. ಗುನ್ನೆ ಸ್ಥಳದ ಬೀಟ್ ನಂ. ನನಗೆ ನೆನಪಿರುವುದಿಲ್ಲ. ದಾಳಿ ಮಾಡಿದ ಸ್ಥಳದಲ್ಲಿ ಡಬ್ಬಿ ಅಂಗಡಿ ಯಾರಿಗೆ ಸೇರಿದ್ದು ಎಂಬ ಪ್ರಶ್ನೆಗೆ ಸಾಕ್ಷಿ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲಆದರೆ ಆರೋಪಿತನೇ ನಡೆಸುತ್ತಿದ್ದನು, ಸದರಿ ದಾಳಿ ಸಮಯದಲ್ಲಿ ಸದರಿ ಡಬ್ಬಿ ಅಂಗಡಿ ಮುಚ್ಚಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ನನ್ನ ದೂರಿನಲ್ಲಿ ಮತ್ತು ಪಂಚನಾಮೆಯಲ್ಲಿ ದಾಳಿ ಸಮಯಕ್ಕೆ ಡಬ್ಬಿ ಅಂಗಡಿ ಮುಚ್ಚಿತ್ತ ಎಂದು ಪ್ರತ್ಯೇಕವಾಗಿ ನಮೂದು ಮಾಡಿಲ್ಲ. ನಾವು ದಾಳಿ ಮಾಡಿದಾಗ ಅಲ್ಲಿ 10-12 ಜನ ಸೇರಿದ್ದರು. ನಮ್ಮನ್ನು ನೋಡಿ ಸದರಿ ಜನರು ಓಡಿ ಹೋಗಿದ್ದರಿಂದ ಅವರ ಹೇಳಿಕೆ ಪಡೆದಿರುವುದಿಲ್ಲ. ದಾಳಿ ನಂತರ ಸ್ಥಳದಲ್ಲಿ ಗ್ರಾಮದ ಜನರ ಹೇಳಿಕೆ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಜಪ್ತಿ ಮಾಡಿಕೊಂಡಂತಹ ಮದ್ಯದ ಪೌಚುಗಳು ಪರವಾನಿಗೆ ಪಡೆದ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಬೆರಳಚ್ಚು ಮಾಡಿರುತ್ತಾರೆ. ನನಗೆ ಯಾವುದೇ ಅಕ್ರಮ ಮದ್ಯ ಮಾರಾಟ ಬಗ್ಗೆ ಬಾತ್ಮಿ ಬಂದಿಲ್ಲ, ನಾನು ಯಾವುದೇ ದಾಳಿ ಮಾಡಿಲ್ಲ ಆರೋಪಿಯಿಂದ ಯಾವುದೇ ಅಕ್ರಮ ಮದ್ಯ ಜಪ್ತಿ ಮಾಡಿಕೊಂಡಿಲ್ಲ, ದೂರನ್ನು ನೀಡಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆ ತಂದಿರತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.